ಶ್ರೀ ಕೋಣಂದೂರು ಲಿಂಗಪ್ಪ —ಹಾಗಾದರೆ ತಾವು ಒದಗಿಸಿರತಕ್ಕಂಥದರಲ್ಲಿ ನಂಬರ್ ೫, ೮, ೯, ೨೦, ೨೯, ೩೩, ೩೯ ಮತ್ತೆ ಪೇಜ್ ೩ ರಲ್ಲಿ ೧೧, ೧೩, ೨೫ ಮತ್ತು ೩೪ ಈ ಕೆರೆಗಳು ಮತ್ತು ಪಿಕ್ ಅಪ್‌ಗಳು ತೀರ್ಥಹಳ್ಳಿಯಲ್ಲಿ ಆಗಿಲ್ಲ ಅವು ಬರೀ ಕಾಗದದಲ್ಲಿ ಮಾತ್ರ ಆಗಿವೆ ಎಂದು ನಿರ್ದಿಷ್ಟವಾಗಿ ನನಗೆ ಗೊತ್ತಿದೆ, ತಾವು ಇದರ ಬಗ್ಗೆ ವಿಚಾರಣೆ ಮಾಡಿಸುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ —ಅಧ್ಯಕ್ಷರೇ ಮಾನ್ಯ ಸದಸ್ಯರು ವಿವರವಾಗಿ ಬರೆದುಕೊಟ್ಟರೆ ಖಂಡಿತವಾಗಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ವಿವರವಾಗಿಯೇ ಹೇಳುತ್ತಿದ್ದೇನೆ. ಈಗಾಗಲೇ ನಾನು ಹೇಳಿರುವ ಕೆರೆಗಳು ಬರೀ ಕಾಗದದ ಮೇಲೆ ಆಗಿದ್ದು ಅಲ್ಲಿಗೆ ಹಣ ಮಂಜೂರು ಆಗಿ ಆಗಲೇ ವಿತರಣೆ ಕೂಡ ಆಗಿದೆ ಎಂಬುದು ನನಗೆ ಖಚಿತವಾಗಿ ಗೊತ್ತಿದೆ, ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಸ್ವಾಮಿ ?

ಶ್ರೀ ಎಚ್ ಸಿ. ಶ್ರೀಕಂಠಯ್ಯ.—ಅದನ್ನು ವಿಚಾರಣೆ ನಡೆಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಆಶ್ವಾಸನೆ ಕೊಡುತ್ತೇನೆ.

Taking over of Bowring Institute

217 SRI K. R. SRINIVASULU NAIDU (Shanthinagara).—Will the Minister for Public Works be pleased to state;—

(*a*) whether there is any proposal before the Government to take over Bowring Institute which is located in a convenient centre

(*b*) the period of lease of the Bowring Institute?

SRI M. MALLIKARJUNA SWAMY (Minister for Public Works).—

(*a*) No.

(*b*) The lease is for 99 years commencing from 1-7-1956.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಇಲ್ಲವೆಂದು ಹೇಳಿದ್ದೀರಿ. ಹಾಗಾದರೆ ಸರ್ಕಾರದವರು ಅವರೊಂದಿಗೆ ಒಪ್ಪಂದ ಮಾಡಿಕೊಂಡಿರುವ ವಿವರ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ —ಅಂಥಾ ಯಾವ ವಿಷಯ ಸಲಹೆ ಇಲ್ಲವೆಂದು ಹೇಳಿದ್ದೇನೆ ಅಷ್ಟೆ. ೯೯ ವರ್ಷಗಳ ಕರಾರು ಆಗಿದೆ ಅಂದರೆ ೧.೭.೧೯೫೬ರಲ್ಲಿ ಕರಾರು ಆಗಿದ್ದು ಅದು ೨೦೫೫ನೇ ಎ ಡಿ ವರೆಗೆ ಕರಾರು ಇದೆ. ಅದನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದಾರೆ ಎಂಬುದನ್ನು ಆ ಕರಾರಿನಲ್ಲಿ ತಿಳಿಸಿ, ಆ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಆ ಸ್ಥಳವನ್ನು ಉಪಯೋಗಿಸಿದ್ದೇ ಆದರೆ ಆಗ ಅದನ್ನು ರದ್ದು ಮಾಡುವುದಕ್ಕೆ ಸರ್ಕಾರ ೫೦ನೇ ಕ್ಲಾಜಿನ ಪ್ರಕಾರ ಒಪ್ಪಂದ ಮಾಡಿಕೊಂಡಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಅದಕ್ಕೋಸ್ಕರವೇ ನಾನು ಆ ಒಪ್ಪಂದದ ವಿವರವನ್ನು ಕೇಳುತ್ತಿರುವುದು. ೯೯ ವರ್ಷಗಳ ಅಗ್ರಿಮೆಂಟ್ ಎಂದರೆ ಅದೇನು ಬಹಳ ದೊಡ್ಡ ಅಗ್ರಿಮೆಂಟ್ ಅಲ್ಲ, ಇವತ್ತಿನ ದಿವಸ ನಾವು ರಾಜಧನವನ್ನೇ ರದ್ದು ಮಾಡಿರುವಾಗ ಅದೇನು ಅಂಥಾ ದೊಡ್ಡದಲ್ಲ. ಅದಕಾಗಿ ಅಲ್ಲಿಯ ಅಗ್ರಿಮೆಂಡ್‌ನ ವಿವರಬೇಕು ಎಂದು ಕೇಳುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—೯೯ ವರ್ಷದ ವರೆಗೆ ಕೊಟ್ಟಿದ್ದೇವೆ ಅಷ್ಟೆ, ಆದರ ಜೊತೆಗೆ ಸುಮಾರು ವರ್ಷಕ್ಕೆ ೩೦ ರೂಪಾಯಿ ಭೂ ಬಾಡಿಗೆ ಕೊಡಬೇಕು ಇದರ ಜೊತೆಗೆ ಕಾರ್ಪೊರೇಷನ್ನಿನವರು ಎಷ್ಟು ತೆರಿಗೆಯನ್ನು ಹಾಕುತ್ತಾರೆ ಎಂದರೆ ಪ್ರತಿ ವರ್ಷಕ್ಕೆ ರೂ. ೬,೧೨೯.೭೨ ಗಳನ್ನು ತೆಗೆದುಕೊಳ್ಳು

ತ್ತಿದ್ದಾರೆ. ಒಂದು ಲಕ್ಷದ ೨೨ ಸಾವಿರದ ೪೨೦ ರೂಪಾಯಿಗಳನ್ನು ಇದುವರೆಗೆ ವಸೂಲು ಮಾಡಿದ್ದಾರೆ. ಅಗ್ರಿಮೆಂಟ್ ಪ್ರಕಾರವಾಗಿ ೨೨೦-೨೨ಕ್ಕೆ ಅಲ್ಲಿ ಒಂದು ಸ್ಥಳ ಮಾತ್ರವಿದೆ. ಮಂತ್ರೆ ೯ ಎಕರೆ ೮೧ ಸೆಂಟ್ ನಲ್ಲಿ ಸ್ಥಳದಲ್ಲಿ ಮಕ್ಕಳ ಉದ್ಯಾನವನಕೋಸ್ಕರವಾಗಿ ಬಿಟ್ಟಿದ್ದಾರೆ. ಮತ್ತು ೯೯ ವರ್ಷ ಮುಂಗಿಯುವು ದಕ್ಕಿಂತ ಮುಂಚೆ ಅಂದರೆ ೧ ವರ್ಷಕ್ಕಿಂತ ಮೊದಲು ಆದನ್ನು ರಿನ್ಯೂ ಮಾಡಿಕೊಳ್ಳಬೇಕಾದರೆ ಅದಕ್ಕೆ ಕರಾರಿನಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಕಾಲಂ ೫ರ ಪ್ರಕಾರ ಅವರು ಆ ಸ್ಥಳವನ್ನೇನಾದರೂ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಂಡರೆ ಆಗ ಸರ್ಕಾರ ಹಾಗೆ ಅವರು ಉಪಯೋಗಿಸಿಕೊಳ್ಳದೇ ಇರುವಂತೆ ನೋಡಿಕೊಳ್ಳಲು ಅಧಿಕಾರ ಇಟ್ಟುಕೊಂಡಿದ್ದೇವೆ. ಅಗ್ರಿಮೆಂಟ್ ಪ್ರಕಾರ ಲಾವಣಿಯೆಂನ್ನು ಕ್ಯಾನ್ಸಲ್ ಮಾಡುವುದಕ್ಕೂ ಅವಕಾಶವಿದೆ.

ಶ್ರೀ ಕೆ. ಆರ್. ಶ್ರೀನಿವಾಸಾಲು ನಾಯ್ಡು.—ಸ್ವಾಮಿ, ಅಲ್ಲಿ ಪಂಜೆಯನ್ನು ಉಟ್ಟುಕೊಂಡು ಒಳಗೆ ಹೋದರೆ ಒಳಕ್ಕೆ ಬಿಡುವುದಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಜೊತೆಗೆ ಇನ್ನೊಂದು ವಿಶಾದಕರ ವಿಷಯವೇನೆಂದರೆ ಕೇವಲ ೩೦ ರೂಪಾಯಿಗಳ ಬಾಡಿಗೆಗೆ ಕೊಟ್ಟಿದ್ದೇವೆಂದು ತಾವೇ ಉತ್ತರದಲ್ಲಿ ಹೇಳಿದಿರಿ. ಆದುದರಿಂದ ಈಗಾಲಾದರೂ ಸರ್ಕಾರದವರು ಬೌರಿಂಗ್ ಇನ್‌ಸ್ಟ್ಯೂಟನ್ನು ವಹಿಸಿಕೊಳ್ಳುವ ಬಗ್ಗೆ ಯೋಚಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ಕೆ. ಆರ್. ಶ್ರೀನಿವಾಸಾಲು ನಾಯ್ಡುರವರು ಅಲ್ಲಿಂದು ನೀತಿ ನಿಯಮಗಳ ಪ್ರಕಾರ ಸೂಟ್ ಹಾಕಿಕೊಂಡು ಹೋದರೆ ಒಳ್ಳೆಯದು.

ಅಧ್ಯಕ್ಷರು.—ಮುಂದಿನ ೨೭೨, ೨೭೪, ೨೭೬ ಮತ್ತು ೨೭೭ನೇ ಪ್ರಶ್ನೆಗಳಿಗೆ ಮಾನ್ಯ ಸದಸ್ಯರು ಗಳು ಸಭೆಯಲ್ಲಿ ಹಾಜರು ಇಲ್ಲ. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಂಗಿಯಿತು.

QUESTIONS FOR ANSWERS ON THE DAY
(but not taken up)

Collection of revenue from Bowring Institute

218. SRI M. B. RAMASWAMY (Anekal).—Will the Minister for Public Works be pleased to state:—

(*a*) the total extent of Government land given to Bowring Institute;

(*b*) the total revenue collected from this Institute by the Corporation.

(*c*) whether there is any proposal before the Government to take over the Bowring Institute ?

SRI M. MALLIKARJUNA SWAMY (Minister for Public Works).—

(*a*) 9.81 acres.

(*b*) Total revenue collected by the Corporation is Rs. 1,22,420.

(*c*) No.